ಸಾಕ್ಷಿಗೆ ದಿನಾಂಕಃ **13.09.2024** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ಪಾಟೀ ಸವಾಲುಃ ಆರೋಪಿತರ ಪರ ಃಶ್ರೀ. ಕೆ ಎಸ್ ಎಸ್ ವಕೀಲರಿಂದ

ಈ ದಿನ ನ್ಯಾಯಾಲಯಕ್ಕೆ ಹಾಜರಾಗಲು ಪೊಲೀಸರು ನನಗೆ ಫೋನ್ ಮಾಡಿ ತಿಳಿಸಿರುತ್ತಾರೆ. ನಾನು ಚಾಸಾ-1 ಮತ್ತು 2 ರವರ ಜೊತೆ ಕೆಲಸ ಮಾಡುತ್ತೇನೆಂದರೆ ಸರಿ. ಚಾಸಾ-1 ಮದ್ಯಪಾನ ಮಾಡುತ್ತಾರೆಂದರೆ ಸರಿ. ಚಾಸಾ-1 ರವರು ಕರ್ತವ್ಯದ ವೇಳೆಯಲ್ಲಿ ಮದ್ಯಪಾನ ಮಾಡಿಕೊಂಡು ಸಾರ್ವಜನಿಕರಿಗೆ ಬಯ್ಯುವುದು ಮಾಡುತ್ತಿದ್ದರು ಎಂದು ಅವರ ಮೇಲೆ ಆಪಾದನೆ ಇರುತ್ತದೆ ಎಂದರೆ ಸರಿಯಲ್ಲ. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿರುತ್ತಾರೆಂದು ನ ರಾ ಪುರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದ್ದು ಅದಕ್ಕೆ ಚಾಸಾ-1 ದಂಡ ಕಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಚಾಸಾ-1 ಮದ್ಯಪಾನ ಮಾಡಿಕೊಂಡು ಸಾರ್ವಜನಿಕರಿಗೆ ಬಯ್ಯುವುದನ್ನು ಆರೋಪಿತರು ಚಾಸಾ-1 ರವರ ಮೇಲಾಧಿಕಾರಿಗಳಿಗೆ ತಿಳಿಸಿರುತ್ತಾರೆಂದರೆ ಸರಿಯಲ್ಲ. ಚಾಸಾ-1 ರವರ ತಾಯಿ ಆಳುಗಳನ್ನು ತನಗೆ ಇಷ್ಟಾಚಾರ ಕರೆಸಿಕೊಳ್ಳುವುದು, ಟ್ರ್ಯಾಕ್ಟರ್ ಗಳನ್ನು ಕರೆಸಿಕೊಂಡು ಕೆಲಸ ಮಾಡಿಕೊಂಡು ಸರಿಯಾದ ಕೂಲಿ ಹಣ ನೀಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರಗಳನ್ನು ಆರೋಪಿತರು ಚಾಸಾ-1 ರವರ ಮೇಲಾಧಿಕಾರಿಗಳ ಗಮನಕ್ಕೆ ತಂದಿರುತ್ತಾರೆಂದರೆ ಸರಿಯಲ್ಲ.

ಹೇಳಲಾದ ಕೃತ್ಯ ಸ್ಥಳವಾದ ನೀಲಗಿರಿ ನೆಡುತೋಪಿನಲ್ಲಿ ಯಾವುದೇ ವಸ್ತುಗಳನ್ನು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ. ಸದರಿ ಘಟನಾ ಸ್ಥಳದಲ್ಲಿ ಟ್ರ್ಯಾಕ್ಟರ್, ಗರಗಸ, ಕತ್ತಿ , ಬೆಳಕಿನ ಸಾಧನಗಳು ಕಂಡು ಬಂದಿರುವುದಿಲ್ಲ ಎಂದರೆ ಸರಿ. ಸದರಿ ವಸ್ತುಗಳನ್ನು ಚಾಸಾ-1 ರವರ ಇಲಾಖೆಯವರು ಜಪ್ತು ಮಾಡಿಕೊಂಡಿರುವುದಿಲ್ಲ ಎಂದರೆ ಸರಿ.

ಆರೋಪಿತರು ನಮ್ಮ ಮನೆ ಹತ್ತಿರ ಯಾವುದೇ ಗಲಾಟೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಮತ್ತು ಅವರ ತಂದೆ-ತಾಯಂದಿರು ಚಾಸಾ-1

ರವರ ಹತ್ತಿರ ದಿನಗೂಲಿ ನೌಕರರಾಗಿ ಕೆಲಸ ಮಾಡುತ್ತಿದ್ದು ಅವರ ಬಳಿ ಚಾಸಾ-1 ರವರ ತಾಯಿ ಹೆಚ್ಚಿನ ಕೆಲಸ ತೆಗೆದುಕೊಂಡು ಸರಿಯಾಗಿ ಹಣ ನೀಡದೆ ಇರುವುದರಿಂದ ಆರೋಪಿತರು ಮೇಲಾಧಿಕಾರಿಗಳಿಗೆ ತಿಳಿಸಿದ್ದರಿಂದ ಮತ್ತು ಚಾಸಾ-1 ರವರು ಮದ್ಯಪಾನ ಮಾಡಿಕೊಂಡು ಕೂಲಿ ಹಣ ಬಗ್ಗೆ ಆರೋಪಿತರಿಗೆ ಅಸಭ್ಯವಾಗಿ ವರ್ತನೆ ಮಾಡಿರುವ ವಿಚಾರ ಆರೋಪಿತರು ಮೇಲಾಧಿಕಾರಿಗಳಿಗೆ ತಿಳಿಸಿದ್ದರಿಂದ ಆರೋಪಿತರು ಚಾಸಾ-1 ರವರಿಗೆ ಯಾವುದೇ ಹಲ್ಲೆ ಮಾಡದಿದ್ದರೂ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಿನಗೂಲಿ ನೌಕರರನ್ನು ನೇಮಕ ಮಾಡುವುದು ಮತ್ತು ಅವರಿಗೆ ಕೂಲಿ ಹಣ ನೀಡುವ ಕೆಲಸ ಚಾಸಾ-1 ರವರ ತಾಯಿ ಕೈಯಲ್ಲಿರುತ್ತದೆ ಎಂದರೆ ಸರಿಯಲ್ಲ. ನಮ್ಮ ತಾಯಿ ಆರೋಪಿತರು ಮತ್ತು ಅವರ ತಂದೆ-ತಾಯಿ ಜೊತೆ ಕೂಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಚಾಸಾ-1 ರವರ ತಾಯಿ, ಚಾಸಾ-1 ಮತ್ತು 2 ದಿನಗೂಲಿ ನೌಕರರ ಪಟ್ಟಿಯ ಪುಸ್ತಕದಲ್ಲಿ ಆಳುಗಳ ಅಂಕೆ ಸಂಖ್ಯೆ ಜಾಸ್ತಿ ತೋರಿಸಿ ಕಡಿಮೆ ಆಳುಗಳಿಂದ ಕೆಲಸ ಮಾಡುತ್ತಿದ್ದೆವು ಎಂದರೆ ಸರಿಯಲ್ಲ. ಸದರಿ ಹೆಚ್ಚು ಅಂಕೆ ಸಂಖ್ಯೆ ತೋರಿಸಿರುವ ಆಳುಗಳ ದಿನಗೂಲಿ ಹಣವನ್ನು ನಾವು ಬಳಸಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಃಃ ಮರು ವಿಚಾರಣೆ ಇಲ್ಲಃಃ

**(ದಿನಾಂಕಃ 13.09.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ